# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 406 |
| ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ |
| ಉತ್ತರಿಸುವ ದಿನಾಂಕ | 13.08.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದ ಅಧೀನದಲ್ಲಿರುವ ಒಟ್ಟು ದೇವಸ್ಥಾನಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ಅಧೀನದಲ್ಲಿ ಒಟ್ಟು 34,566 ಅಧಿಸೂಚಿತ ಸಂಸ್ಥೆಗಳಿರುತ್ತವೆ.<br><br>ಜಿಲ್ಲಾವಾರು ವಿವರವನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| ಆ) | ಸರ್ಕಾರಕ್ಕೆ ಪ್ರತಿ ತಿಂಗಳು ಸಂಗ್ರಹವಾಗುತ್ತಿರುವ ಮೊತ್ತ ಎಷ್ಟು;<br>ದೇವಾಲಯವಾರು/ಜಿಲ್ಲಾವಾರು ಮಾಹಿತಿ ನೀಡುವುದು; ಸಂಗ್ರಹವಾದ ಮೊತ್ತವನ್ನು ಯಾವ-ಯಾವ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ಅಧಿಸೂಚಿತ ಸಂಸ್ಥೆಗಳಿಂದ ಸಂಗ್ರಹವಾಗುವ ಯಾವುದೇ ಆದಾಯವನ್ನು **ಸರ್ಕಾರದ ಬೊಕ್ಕಸಕ್ಕೆ ಜಮೆ ಮಾಡಲಾಗುವುದಿಲ್ಲ.**<br><br>ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಲ್ಲಿ ಭಕ್ತರು ನೀಡಿರುವ ಕಾಣಿಕೆ, ಹರಕೆ ಸೇವೆ ಇತ್ಯಾದಿಗಳ ಮೂಲಕ ಬರುವ ಆದಾಯವನ್ನು ಆಯಾಯ ದೇವಾಲಯಗಳ ನಿಧಿಗೆ (ಬ್ಯಾಂಕ್ ಖಾತೆಗೆ) ಜಮಾ ಮಾಡಲಾಗುತ್ತಿದೆ.<br><br>ಸದರಿ ಹಣವನ್ನು ದೇವಾಲಯದ ನಿರ್ವಹಣೆಗೆ ನಿತ್ಯಕಟ್ಲೆ, ಹೆಚ್ಚುಕಟ್ಲೆ, ರಥೋತ್ಸವ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ/ಜೀರ್ಣೋದ್ಧಾರ ಮತ್ತು ಮೂಲಭೂತ ಸೌಕರ್ಯ ಹಾಗೂ ದೇವಾಲಯದ ವತಿಯಿಂದ ನಡೆಸುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಉದ್ದೇಶ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 36(1)ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದ ಅನ್ವಯ ಬಳಸಲಾಗುತ್ತಿದೆ.<br><br>ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 17(ಎ) ರಡಿಯಲ್ಲಿ ಅವಕಾಶ ಕಲ್ಪಿಸಲಾದಂತೆ ಪ್ರವರ್ಗ 'ಎ' ಅಧಿಸೂಚಿತ ಅಥವಾ ಘೋಷಿತ ಸಂಸ್ಥೆಗಳು ತಮ್ಮ ಒಟ್ಟು ವಾರ್ಷಿಕ ನಿವ್ವಳ ಆದಾಯದ ಶೇಕಡ 10 ರಷ್ಟು ಮತ್ತು 'ಬಿ' ವರ್ಗದ ಅಧಿಸೂಚಿತ ಅಥವಾ ಘೋಷಿತ ಸಂಸ್ಥೆಗಳು ತಮ್ಮ ಒಟ್ಟು ವಾರ್ಷಿಕ ನಿವ್ವಳ ಆದಾಯದ ಶೇಕಡ 5 ರಷ್ಟು ದರದಲ್ಲಿ ವಂತಿಗೆಗಳನ್ನು ಸಾಮಾನ್ಯ ಸಂಗ್ರಹಣಾ ನಿಧಿ ಪಾವತಿಸಬೇಕಾಗಿರುತ್ತದೆ. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಸಾಮಾನ್ಯ ಸಂಗ್ರಹಣ ನಿಧಿಯಲ್ಲಿನ ಕಾಯ್ದೆಯ ಕಲಂ 19(1) ಮತ್ತು (2) ರನ್ವಯ ಹಿಂದೂ ಧಾರ್ಮಿಕ ಸಂಸ್ಥೆಗಳಿಗೆ ಧಾರ್ಮಿಕ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಬಳಕೆ ಮಾಡಿಕೊಳ್ಳಲಾಗುತ್ತಿದೆ.</td></tr>
<tr><td>ಇ)</td><td>ನಮ್ಮ ರಾಜ್ಯ ಹೊರತುಪಡಿಸಿ ಬೇರೆ ರಾಜ್ಯಗಳ ದೇವಾಲಯಗಳಲ್ಲಿ ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆಯೇ; ಇದ್ದಲ್ಲಿ, ಮಾಹಿತಿ ನೀಡುವುದು;</td><td>ಹೊರ ರಾಜ್ಯಗಳ ದೇವಾಲಯಗಳಲ್ಲಿ ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿಲ್ಲ. ಆದರೆ, ಹೊರರಾಜ್ಯಗಳ ಈ ಕೆಳಕಂಡ ಶ್ರೀಕ್ಷೇತ್ರಗಳಲ್ಲಿ ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೊಳಪಡುವ ಕರ್ನಾಟಕ ರಾಜ್ಯ ಛತ್ರ/ಕರ್ನಾಟಕ ಭವನಗಳಿರುತ್ತವೆ.
<table>
<tr><th>ಕ್ರ.ಸಂ.</th><th>ರಾಜ್ಯ</th><th>ಶ್ರೀಕ್ಷೇತ್ರ</th></tr>
<tr><td>(1)</td><td>ಆಂಧ್ರಪ್ರದೇಶ</td><td>ತಿರುಮಲ, ತಿರುಚಾನೂರು, ಮಂತ್ರಾಲಯ, ಶ್ರೀಶೈಲಂ</td></tr>
<tr><td>(2)</td><td>ಮಹಾರಾಷ್ಟ್ರ</td><td>ತುಳಜಾಪುರ, ಗುಡ್ಡಾಪುರ</td></tr>
<tr><td>(3)</td><td>ಉತ್ತರಪ್ರದೇಶ</td><td>ವಾರಣಾಸಿ</td></tr>
</table></td></tr>
<tr><td>ಈ)</td><td>ಬೇರೆ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುವ ಹಲವು ಕಾರ್ಯನಿರ್ವಾಹಕ ಅಧಿಕಾರಿಗಳು ಜನಪ್ರತಿನಿಧಿಗಳ ಪತ್ರಗಳಿಗೆ /ಕರೆಗಳಿಗೆ ಸ್ಪಂದಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು; (ವಿವರ ನೀಡುವುದು)</td><td>ಹೊರ ರಾಜ್ಯಗಳಲ್ಲಿರುವ ಕರ್ನಾಟಕ ರಾಜ್ಯ ಛತ್ರ/ ಕರ್ನಾಟಕ ಭವನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಸಿಬ್ಬಂದಿಗಳು ಜನಪ್ರತಿನಿಧಿಗಳ ಪತ್ರಗಳಿಗೆ/ಕರೆಗಳಿಗೆ ಸ್ಪಂದಿಸಿ ಕಾರ್ಯನಿರ್ವಹಿಸುತ್ತಿರುತ್ತಾರೆ.<br><br>ಜನ ಪ್ರತಿನಿಧಿಗಳ ಪತ್ರಗಳಿಗೆ/ಕರೆಗಳಿಗೆ ಸ್ಪಂದಿಸದೆ ಇರುವ ಬಗ್ಗೆ, ಛತ್ರದ ನಿರ್ದಿಷ್ಟ ಅಧಿಕಾರಿ/ಸಿಬ್ಬಂದಿಗಳ ಬಗ್ಗೆ ಪತ್ರ ನೀಡಿದಲ್ಲಿ ಅಂತಹ ಅಧಿಕಾರಿ/ಸಿಬ್ಬಂದಿ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು</td></tr>
<tr><td>ಉ)</td><td>ತಿರುಪತಿಯಲ್ಲಿರುವ ಕರ್ನಾಟಕ ಭವನದಲ್ಲಿ ನಮ್ಮ ರಾಜ್ಯದ ಗಣ್ಯರಿಗೆ/ ಶಾಸಕರುಗಳಿಗೆ ಕೊಠಡಿಗಳನ್ನು ಕಾಯ್ದಿರಿಸಲಾಗುತ್ತದೆಯೇ; ನಿಗಧಿಪಡಿಸಿದಲ್ಲಿ ಎಷ್ಟು ಕೊಠಡಿಗಳನ್ನು ಕಾಯ್ದಿರಿಸಲಾಗುತ್ತದೆ; ಅವುಗಳಿಗೆ ನಿಗಧಿಪಡಿಸಿದ ಮೊತ್ತ ಎಷ್ಟು;</td><td>ಕರ್ನಾಟಕ ರಾಜ್ಯದ ಗಣ್ಯರಿಗೆ/ ಶಾಸಕರುಗಳಿಗೆ ಛತ್ರದ ವಸತಿ ಗೃಹದ ಕೊಠಡಿಗಳನ್ನು ಕಾಯ್ದಿರಿಸಲಾಗುತ್ತಿದೆ.<br><br>ಸದರಿಯವರ ಕಛೇರಿಗಳಿಂದ ಕೊಠಡಿಗಳ ಕಾಯ್ದಿರಿಸುವಿಕೆಗಾಗಿ ಮುಂಚಿತವಾಗಿ ನೀಡುವ ಮಾಹಿತಿ/ಪತ್ರಗಳ ಆಧಾರದ ಮೇರೆಗೆ ಕೊಠಡಿಗಳನ್ನು ಕಾಯ್ದಿರಿಸಲಾಗುತ್ತಿದೆ.<br><br>ಆಂಧ್ರಪ್ರದೇಶ, ತಿರುಮಲದ ಕರ್ನಾಟಕ ರಾಜ್ಯ ಛತ್ರದ ಐಹೊಳೆ ಬ್ಲಾಕ್ ನಲ್ಲಿರುವ 132 ಕೊಠಡಿಗಳ ಪೈಕಿ 90 ಕೊಠಡಿಗಳನ್ನು ಮತ್ತು ಹಂಪಿ ಬ್ಲಾಕ್‌ನಲ್ಲಿ ಲಭ್ಯವಿರುವ ಒಟ್ಟು 110 ಕೊಠಡಿಗಳಲ್ಲಿ 71 ಕೊಠಡಿಗಳ(AC ಕೊಠಡಿಗಳು)ಪೈಕಿ 50 ಕೊಠಡಿಗಳನ್ನು ಮತ್ತು 39 ಕೊಠಡಿಗಳ(AC Suits)ಪೈಕಿ 15 ಕೊಠಡಿಗಳನ್ನು ಭಕ್ತಾದಿಗಳಿಗೆ ಮುಂಗಡವಾಗಿ ಆನ್ ಲೈನ್ ಮೂಲಕ ಕಾಯ್ದಿರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಸನ್ಮಾನ್ಯ ಮುಖ್ಯ ಮಂತ್ರಿಗಳ/ಸಚಿವರುಗಳ/ಶಾಸಕರುಗಳ ಮತ್ತು ಇತರೆ ಉನ್ನತ ಮಟ್ಟದ ಅಧಿಕಾರಿಗಳ ಕಛೇರಿಗಳಿಂದ ನೀಡುವ ಶಿಫಾರಸ್ಸು ಪತ್ರಗಳಿಗೆ ಆದ್ಯತೆಯನ್ನು ನೀಡಿ, ಕೊಠಡಿಗಳ ಲಭ್ಯತೆಗನುಗುಣವಾಗಿ ಹಂಚಿಕೆ ಮಾಡಲಾಗುತ್ತಿರುತ್ತದೆ. ತಿರುಮಲದ ಕರ್ನಾಟಕ ರಾಜ್ಯ ಛತ್ರದ ಕೊಠಡಿಗಳಿಗೆ ನಿಗಧಿಪಡಿಸಿರುವ ಮೊತ್ತದ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಊ) | ತಿರುಪತಿಯ ಕರ್ನಾಟಕ ಭವನದಲ್ಲಿ ಒಟ್ಟು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಎಷ್ಟು ಜನ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ; (ಅವರುಗಳ ಸಂಪೂರ್ಣ ಮಾಹಿತಿ ನೀಡುವುದು) | ಆಂಧ್ರಪ್ರದೇಶ, ತಿರುಮಲ, ತಿರುಪತಿ ಹಾಗೂ ತಿರುಚಾನೂರು ಕರ್ನಾಟಕ ರಾಜ್ಯ ಛತ್ರದಲ್ಲಿ ಒಟ್ಟು 8 ಇಲಾಖೆ ಅಧಿಕಾರಿ/ಸಿಬ್ಬಂದಿ ವರ್ಗದವರಿದ್ದು ಈ ಪೈಕಿ 5 ಮಂದಿ ಕನ್ನಡಿಗರು ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದಂತೆ ಸ್ಥಳೀಯವಾಗಿ ಒಟ್ಟು 61 ಛತ್ರದ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 7 ಮಂದಿ ಕನ್ನಡಿಗರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿ ಅಧಿಕಾರಿ/ ಸಿಬ್ಬಂದಿಗಳ ವಿವರಗಳನ್ನು **ಅನುಬಂಧ -03** ರಲ್ಲಿ ಒದಗಿಸಿದೆ. |
| ಋ) | ತಿರುಪತಿಯ ಕರ್ನಾಟಕ ಭವನದಿಂದ ಬರುವ ಒಟ್ಟು ವಾರ್ಷಿಕ ಆದಾಯ ಎಷ್ಟು? (ಮಾಹಿತಿ ನೀಡುವುದು) | ಆಂಧ್ರಪ್ರದೇಶ, ತಿರುಮಲ ಕರ್ನಾಟಕ ರಾಜ್ಯ ಛತ್ರದ 2024-25ನೇ ಸಾಲಿನ ವಾರ್ಷಿಕ ಆದಾಯ **ರೂ.10,94,00,424/-** ಗಳಾಗಿರುತ್ತದೆ. |

ಸಂಖ್ಯೆ: ಕಂಇ 146 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

ಅನುಬಂಧ-1

# ರಾಜ್ಯದಲ್ಲಿರುವ ಒಟ್ಟು ಅಧಿಸೂಚಿತ ಸಂಸ್ಥೆಗಳ ವಿವರದ ತ:ಖ್ತೆ

(ಸರ್ಕಾರದ ಅಧಿಸೂಚನೆ ಸಂಖ್ಯೆ:RD 87 MUAABI 2012 DT:29.09.2012 ರಂದು ಪ್ರಕಟಿಸಿರುವ ಅಧಿಸೂಚಿತ ಸಂಸ್ಥೆಗಳ ಪಟ್ಟಿಯ ಆಧಾರದ ಮೇರೆಗೆ)

(ಜಿಲ್ಲಾವಾರು ಅಂಕಿ ಅಂಶ)

| ಕ್ರ ಸಂ | ಜಿಲ್ಲೆ | ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿರುವ ದೇವಾಲಯಗಳ ಸಂಖ್ಯೆ | ಅಧಿಸೂಚಿತ ಸಂಸ್ಥೆಗಳ ಪಟ್ಟಿಗೆ ಸೇರ್ಪಡೆ ಮಾಡಲಾದ ಸಂಸ್ಥೆಗಳ ಸಂಖ್ಯೆ | ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತು ಪಡಿಸಲಾದ ಸಂಸ್ಥೆಗಳ ಸಂಖ್ಯೆ | ಪ್ರಸ್ತುತ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು ನಗರ | 1016 | 91 | 02 | 1105 |
| 2 | ಬೆಂಗಳೂರು ಗ್ರಾಮಾಂತರ | 1076 | 69 | 05 | 1140 |
| 3 | ಬಾಗಲಕೋಟೆ | 1167 | 0 | 01 | 1166 |
| 4 | ಬಳ್ಳಾರಿ | 1294 | 5 | 0 | 1299 |
| 5 | ಬೆಳಗಾವಿ | 3803 | 08 | 05 | 3806 |
| 6 | ವಿಜಯಪುರ | 551 | 01 | 01 | 551 |
| 7 | ಬೀದರ್ | 533 | 0 | 03 | 530 |
| 8 | ಚಾಮರಾಜನಗರ | 414 | 0 | 0 | 414 |
| 9 | ಚಿಕ್ಕಬಳ್ಳಾಪುರ | 1069 | 03 | 0 | 1072 |
| 10 | ಚಿಕ್ಕಮಗಳೂರು | 869 | 11 | 0 | 880 |
| 11 | ಚಿತ್ರದುರ್ಗ | 305 | 01 | 01 | 305 |
| 12 | ದಕ್ಷಿಣ ಕನ್ನಡ | 481 | 20 | 06 | 495 |
| 13 | ದಾವಣಗೆರೆ | 612 | 11 | 02 | 621 |
| 14 | ಧಾರವಾಡ | 938 | 02 | 10 | 930 |
| 15 | ಗದಗ | 1382 | 06 | 0 | 1388 |
| 16 | ಕಲ್ಬುರ್ಗಿ | 1629 | 03 | 02 | 1630 |
| 17 | ಹಾಸನ | 2443 | 14 | 01 | 2456 |
| 18 | ಹಾವೇರಿ | 1288 | 03 | 0 | 1291 |
| 19 | ಕೊಡಗು | 7 | 0 | 0 | 07 |
| 20 | ಕೋಲಾರ | 1320 | 08 | 0 | 1328 |
| 21 | ಕೊಪ್ಪಳ | 736 | 04 | 01 | 739 |
| 22 | ಮಂಡ್ಯ | 2008 | 115 | 01 | 2122 |
| 23 | ಮೈಸೂರು | 1313 | 02 | 04 | 1311 |
| 24 | ರಾಯಚೂರು | 1287 | 01 | 01 | 1287 |
| 25 | ರಾಮನಗರ | 865 | 02 | 0 | 867 |
| 26 | ಶಿವಮೊಗ್ಗ | 643 | 01 | 01 | 643 |
| 27 | ತುಮಕೂರು | 2462 | 0 | 01 | 2461 |
| 28 | ಉಡುಪಿ | 812 | 09 | 12 | 809 |
| 29 | ಉತ್ತರಕನ್ನಡ | 769 | 02 | 70 | 701 |
| 30 | ಯಾದಗಿರಿ | 1209 | 03 | 0 | 1212 |
| | ಒಟ್ಟು | 34301 | 395 | 130 | 34566 |

ಸಂ:ಎಲ್.ಸಿ.ಕ್ಯೂ/ಸಿಆರ್/27/2025-26 ದಿನಾಂಕ:07.08.2025

# ಅನುಬಂಧ-1

**ಆಂಧ್ರಪ್ರದೇಶ, ತಿರುಮಲ ಕರ್ನಾಟಕ ರಾಜ್ಯ ಛತ್ರದಲ್ಲಿನ ಕೊಠಡಿಗಳಿಗೆ ನಿಗದಿಪಡಿಸಿರುವ ದಿನದ ಬಾಡಿಗೆ ವಿವರಗಳು ಈ ಕೆಳಕಂಡಂತ್ತಿರುತ್ತದೆ.**

| ಕ್ರ. ಸಂ. | ಬ್ಲಾಕ್ ಗಳ ವಿವರ | ಕೊಠಡಿಗಳ ವಿವರ | ನಿಗದಿಪಡಿಸಿರುವ ಬಾಡಿಗೆ ಮೊತ್ತ (ರೂ.ಗಳಲ್ಲಿ) |
|---|---|---|---|
| (1) | ಹಳೇಬೀಡು ಬ್ಲಾಕ್ (ಹಳೆಯ ಕೆ.ಪಿ.ಎಸ್ ಕಟ್ಟಡ) | 82 ಸಾಮಾನ್ಯ ಕೊಠಡಿಗಳು | 900/- + GST |
| (2) | ಐಹೊಳೆ ಬ್ಲಾಕ್ | 132 ಸಾಮಾನ್ಯ ಕೊಠಡಿಗಳು | 1,350/- +GST |
| (3) | ಹಂಪಿ ಬ್ಲಾಕ್ | 71 AC ಕೊಠಡಿಗಳು | 2,500/- +GST |
| | | 39 AC Suites (ಒಟ್ಟು 110 ಕೊಠಡಿಗಳು) | 3,500/- +GST |

ಆಯುಕ್ತರ ಪರವಾಗಿ
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.
ಧರ್ಮಾದಾಯ ದತ್ತಿಗಳ ಇಲಾಖೆ,
ಚಾಮರಾಜಪೇಟೆ, ಬೆಂಗಳೂರು-560 018

ಸಂ:ಎಲ್.ಸಿ.ಕ್ಯೂ/ಸಿಆರ್/27/2025-26 ದಿನಾಂಕ:07.08.2025

# ಅನುಬಂಧ-3

## ಆಂಧ್ರಪ್ರದೇಶ, ತಿರುಪತಿ ತಿರುಮಲದ ಕರ್ನಾಟಕ ರಾಜ್ಯ ಛತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇಲಾಖಾ ಅಧಿಕಾರಿಗಳ ಹಾಗೂ ಸಿಬ್ಬಂದಿ ವರ್ಗದವರ ವಿವರ

| ಕ್ರ ಸಂ | ಅಧಿಕಾರಿ/ಸಿಬ್ಬಂದಿ ವರ್ಗದವರ ಹೆಸರು | ಪದನಾಮ |
|---|---|---|
| 1 | ಶ್ರೀ ಕೆ. ಕೋದಂಡರಾಮ್ | ವಿಶೇಷ ಅಧಿಕಾರಿ |
| 2 | ಶ್ರೀ ಡಿ.ಎನ್. ಜಾಧವ್ | ಉಪ ವಿಶೇಷ ಅಧಿಕಾರಿ |
| 3 | ಶ್ರೀ ಟಿ. ಕೃಷ್ಣಮೂರ್ತಿ | ಪ್ರ.ದ.ಸ |
| 4 | ಶ್ರೀ ಹನುಮಂತರಾಯ | ದ್ವಿ.ದ.ಸ |
| 5 | ಶ್ರೀ ಕೆ. ಆನಂದ ರೆಡ್ಡಿ | ಗ್ರೂಪ್ "ಡಿ" |
| 6 | ಶ್ರೀ ಎನ್. ಮುನಿವೇಲು | ಸ್ಯಾನಿಟರಿ ಇನ್ಸ್‌ಪೆಕ್ಟರ್ |
| 7 | ಶ್ರೀ ಪಿ. ರೆಡ್ಡಪ್ಪ | ವಾಟರ್ ಫಿಟ್ಟರ್ |
| 8 | ಶ್ರೀ ಜಿ.ಸಿ. ಚಂದ್ರಶೇಖರ್ | ಎಲೆಕ್ಟ್ರಿಷಿಯನ್ |

## ಆಂಧ್ರಪ್ರದೇಶ, ತಿರುಮಲ, ತಿರುಪತಿ ಮತ್ತು ತಿರುಚಾನೂರು ಕರ್ನಾಟಕ ರಾಜ್ಯ ಛತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಛತ್ರದ ಸಿಬ್ಬಂದಿಗಳ ವಿವರ

| ಕ್ರ. ಸಂ | ಸಿಬ್ಬಂದಿ ವರ್ಗದವರ ಹೆಸರು | ಪದನಾಮ |
|---|---|---|
| 1 | ಆರ್. ನಾಗರಾಜ | ಸಹಾಯಕ ವ್ಯವಸ್ಥಾಪಕ |
| 2 | ಬಿ. ನಾಗರಾಜು | ಸಹಾಯಕ ವ್ಯವಸ್ಥಾಪಕ |
| 3 | ವಿ. ಸುಧಾಕರ | ಸಹಾಯಕ ವ್ಯವಸ್ಥಾಪಕ |
| 4 | ಇ. ಕುಮಾರ್ | ಸ್ವಚ್ಛತಾ ಮೇಲ್ವಿಚಾರಕ |
| 5 | ವಿ ಮುರಳಿ | ಸಹಾಯಕ ವ್ಯವಸ್ಥಾಪಕ |
| 6 | ಆರ್. ಶ್ರೀರಾಮುಲು | ಸ್ವಚ್ಛತಾ ಮೇಲ್ವಿಚಾರಕ |
| 7 | ಎನ್. ಅನಸೂಯಮ್ಮ | ಸ್ವಚ್ಛತಾ ಮೇಲ್ವಿಚಾರಕ |
| 8 | ವೆಂಕಟಸುಬ್ಬ ಜೆ. | ಸ್ವಚ್ಛತಾ ಮೇಲ್ವಿಚಾರಕ |
| 9 | ರೆಡ್ಡಮ್ಮ | ಸ್ವಚ್ಛತಾ ಮೇಲ್ವಿಚಾರಕ |
| 10 | ಕೆ. ಪವನ್ ಕುಮಾರ್ ರೆಡ್ಡಿ | ಸಹಾಯಕ ವ್ಯವಸ್ಥಾಪಕ |
| 11 | ಎಸ್. ವೇಣುಗೋಪಾಲ್ ರೆಡ್ಡಿ | ಸ್ವಚ್ಛತಾ ಮೇಲ್ವಿಚಾರಕ |
| 12 | ಆರ್. ಚಂದ್ರಶೇಖರ್ | ಸಹಾಯಕ ವ್ಯವಸ್ಥಾಪಕ |
| 13 | ಆರ್. ಮುನೀಶ್ವರಯ್ಯ | ಸಹಾಯಕ ವ್ಯವಸ್ಥಾಪಕ |
| 14 | ಜಿ.ಸುಬ್ರಹ್ಮಣ್ಯಂ ರೆಡ್ಡಿ | ಸಹಾಯಕ ವ್ಯವಸ್ಥಾಪಕ |
| 15 | ಎಸ್. ಹಿಮಕುಮಾರ್ | ಸ್ವಚ್ಛತಾ ಮೇಲ್ವಿಚಾರಕ |

| | | |
|---|---|---|
| 16 | ಆರ್. ಆನಂದ್ | ಸ್ವಚ್ಛತಾ ಮೇಲ್ವಿಚಾರಕ |
| 17 | ಡಿ. ಗಿರಿಬಾಬು | ಸಹಾಯಕ ವ್ಯವಸ್ಥಾಪಕ |
| 18 | ಎಂ. ಕೇಶವಲು ರೆಡ್ಡಿ | ಸಹಾಯಕ ವ್ಯವಸ್ಥಾಪಕ |
| 19 | ಎಂ. ಹೊನ್ನೂರು ಸ್ವಾಮಿ | ಸ್ವಚ್ಛತಾ ಮೇಲ್ವಿಚಾರಕ |
| 20 | ವಿ. ಶಶಿಕುಮಾರ್ | ಸಹಾಯಕ ವ್ಯವಸ್ಥಾಪಕ |
| 21 | ವಿ. ರಮಣ | ಸ್ವಚ್ಛತಾ ಮೇಲ್ವಿಚಾರಕ |
| 22 | ಕೆ. ರವಿ | ಸ್ವಚ್ಛತಾ ಮೇಲ್ವಿಚಾರಕ |
| 23 | ಎಸ್. ನಾಗೇಶ್ವರ್ ರಾವ್ | ಸ್ವಚ್ಛತಾ ಮೇಲ್ವಿಚಾರಕ |
| 24 | ಎನ್. ನಾಂಚಾರಮ್ಮ | ಸ್ವಚ್ಛತಾ ಮೇಲ್ವಿಚಾರಕ |
| 25 | ಜಿ. ಅಲುವೇಲಮ್ಮ | ಸ್ವಚ್ಛತಾ ಮೇಲ್ವಿಚಾರಕ |
| 26 | ಆರ್. ಸುನೀತ | ಸಹಾಯಕ ವ್ಯವಸ್ಥಾಪಕ |
| 27 | ಪಿ. ವೆಂಕಟೇಶ್ವರ | ಸ್ವಚ್ಛತಾ ಮೇಲ್ವಿಚಾರಕ |
| 28 | ಕೆ. ಸುರೇಂದ್ರಬಾಬು | ಸಹಾಯಕ ವ್ಯವಸ್ಥಾಪಕ |
| 29 | ಪಿ. ಸುಬ್ರಹ್ಮಣ್ಯಂ | ಸ್ವಚ್ಛತಾ ಮೇಲ್ವಿಚಾರಕ |
| 30 | ಪಿ. ನಿರ್ಮಲ | ಸ್ವಚ್ಛತಾ ಮೇಲ್ವಿಚಾರಕ |
| 31 | ಇ. ಚಿರಂಜೀವಿ | ಸ್ವಚ್ಛತಾ ಮೇಲ್ವಿಚಾರಕ |
| 32 | ಪಿ. ರಮಣಮ್ಮ | ಸ್ವಚ್ಛತಾ ಮೇಲ್ವಿಚಾರಕ |
| 33 | ಎ. ಅಮೃತ | ಸ್ವಚ್ಛತಾ ಮೇಲ್ವಿಚಾರಕ |
| 34 | ಬಿ. ಗೌತಮ್ | ಅಟೆಂಡರ್ |
| 35 | ಎನ್. ಮಂಜುನಾಥ್ | ಸ್ವಚ್ಛತಾ ಮೇಲ್ವಿಚಾರಕ |
| 36 | ಕೆ. ಸುಬ್ರಹ್ಮಣ್ಯ ರೆಡ್ಡಿ | ಸ್ವಚ್ಛತಾ ಮೇಲ್ವಿಚಾರಕ |
| 37 | ಗೋಪಿನಾಥ್ ರಾವ್ | ನವಗ್ರಹ ಅರ್ಚಕ |
| 38 | ಪಿ. ಜ್ಯೋತಿ | ಸ್ವಚ್ಛತಾ ಮೇಲ್ವಿಚಾರಕ |
| 39 | ಕೆ. ಮುರಳಿ | ಸ್ವಚ್ಛತಾ ಮೇಲ್ವಿಚಾರಕ |
| 40 | ಎಂ. ರಮಣ | ಸ್ವಚ್ಛತಾ ಮೇಲ್ವಿಚಾರಕ |
| 41 | ಎಂ. ರಾಮಾಂಜಲು | ಸ್ವಚ್ಛತಾ ಮೇಲ್ವಿಚಾರಕ |
| 42 | ಕೆ. ಹರೀಶ್ | ಪ್ರೊಟೋಕಾಲ್ ಅಟೆಂಡರ್ |
| 43 | ಕೆ. ಶಿವಪ್ರಸಾದ್ | ಸ್ವಚ್ಛತಾ ಮೇಲ್ವಿಚಾರಕ |
| 44 | ಆರ್. ದೀಪಿಕ | ಬೆರಳಚ್ಚುಗಾರರು |
| 45 | ಟಿ.ಎನ್. ವಿಜಯಲಕ್ಷ್ಮಿ | ಕ್ಲರ್ಕ್ (ಗುಮಾಸ್ತರು) |
| 46 | ಆರ್. ವೇಣುಗೋಪಾಲ್ | ಸ್ವಾಗತಗಾರರು |
| 47 | ಕಾಕಿಮನು ಸೇವಂತ್ | ಸ್ವಾಗತಗಾರರು |
| 48 | ಅಕುಲ ವಾಣಿ | ಸ್ವಾಗತಗಾರರು |
| 49 | ಸುಬ್ರಹಣ್ಯ ಜಿ | ಸ್ವಾಗತಗಾರರು |
| 50 | ಮನೋಹರ್ ಪಿ | ಸ್ವಾಗತಗಾರರು |
| 51 | ಕಾರ್ತಿಕ್ ಎಸ್. | ಸ್ವಾಗತಗಾರರು |

| | | |
|---|---|---|
| 52 | ಆರ್. ಭಾನುಶ್ರೀ | ಸ್ವಾಗತಗಾರರು |
| 53 | ಎನ್. ವೆಂಕಟನಾಗರಾಜು | ಆಫೀಸ್ ಅಸಿಸ್ಟೆಂಟ್ |
| 54 | ನಾಗೇಂದ್ರ ಆರ್. | ಅಸಿಸ್ಟೆಂಟ್ ಫಿಟ್ಟರ್ |
| 55 | ಟಿ. ಚಂದ್ರ ಶೇಖರ್ | ಡ್ರೈವರ್ |
| 56 | ಪ್ರವೀಣ್ ಶಿರಬೂರ್ | ಅಟೆಂಡರ್ |
| 57 | ವಿ. ರೆಡ್ಡಿ ರಾಜ | ಅಟೆಂಡರ್ |
| 58 | ಸಿ. ಹರಿಪ್ರಸಾದ್ | ಅಟೆಂಡರ್ |
| 59 | ಉಪೇಂದ್ರ ಜಿ. | ವಾಟರ್ ಫಿಟ್ಟರ್ |
| 60 | ಮುನಿರಾಜು ಬಿ.ಕೆ. | ಉಗ್ರಾಣ ಸಹಾಯಕರು |
| 61 | ವಿ. ದಿಲೀಪ್ ಕುಮಾರ್ | ಉಗ್ರಾಣ ಸಹಾಯಕರು |

**ಆಂಧ್ರಪ್ರದೇಶ, ತಿರುಮಲದ ಕರ್ನಾಟಕ ರಾಜ್ಯ ಛತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕನ್ನಡಿಗ ಅಧಿಕಾರಿ / ಸಿಬ್ಬಂದಿಗಳ ವಿವರ.**

| ಕ್ರ ಸಂ | **ಸಿಬ್ಬಂದಿ ವರ್ಗದವರ ಹೆಸರು** | **ಪದನಾಮ** | **ಸ್ಥಳ** |
|---|---|---|---|
| 1 | ಶ್ರೀ ಕೆ. ಕೋದಂಡರಾಮ್ | ವಿಶೇಷ ಅಧಿಕಾರಿ | ಬೆಂಗಳೂರು |
| 2 | ಶ್ರೀ ಡಿ.ಎನ್. ಜಾಧವ್ | ಉಪ ವಿಶೇಷ ಅಧಿಕಾರಿ | ಬೆಳಗಾವಿ |
| 3 | ಶ್ರೀ ಟಿ. ಕೃಷ್ಣಮೂರ್ತಿ | ಪ್ರ.ದ.ಸ | ಬೆಂಗಳೂರು |
| 4 | ಶ್ರೀ ಹನುಮಂತರಾಯ | ದ್ವಿ.ದ.ಸ | ತುಮಕೂರು |
| 5 | ಶ್ರೀ ಪಿ. ರೆಡ್ಡಪ್ಪ | ವಾಟರ್ ಫಿಟ್ಟರ್ | ಬೆಂಗಳೂರು |
| 6 | ಟಿ.ಎನ್. ವಿಜಯಲಕ್ಷ್ಮಿ | ಕ್ಲರ್ಕ್ (ಗುಮಾಸ್ತರು) | ಬೆಂಗಳೂರು |
| 7 | ನಾಗೇಂದ್ರ ಆರ್. | ಅಸಿಸ್ಟೆಂಟ್ ಫಿಟ್ಟರ್ | ಪಾವಗಡ |
| 8 | ಪ್ರವೀಣ್ ಶಿರಬೂರ್ | ಅಟೆಂಡರ್ | ಬೆಳಗಾವಿ |
| 9 | ಮನೋಹರ್ ಪಿ | ಸ್ವಾಗತಗಾರರು | ಮಂಡ್ಯ |
| 10 | ಕಾರ್ತಿಕ್ ಎಸ್. | ಸ್ವಾಗತಗಾರರು | ಬೆಂಗಳೂರು |
| 11 | ಉಪೇಂದ್ರ ಜಿ. | ವಾಟರ್ ಫಿಟ್ಟರ್ | ಬೆಂಗಳೂರು |
| 12 | ಮುನಿರಾಜು ಬಿ.ಕೆ. | ಉಗ್ರಾಣ ಸಹಾಯಕರು | ಬೆಂಗಳೂರು |

ಆಯುಕ್ತರುವಾಗಿ
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.
ಧರ್ಮಾದಾಯ ದತ್ತಿಗಳ ಇಲಾಖೆ.
ಚಾಮರಾಜಪೇಟೆ, ಬೆಂಗಳೂರು-560 018